



**SARAYU** - Kannada Monthly Regn. No. KARKAN/2014/62363
**July Vol. : 11 Issue : 3** 5126/ ಕ್ರೋಧಿ ಸಂವತ್ಸರ ಆಗೋಸ್ಟ್ 2024 ಪುಟ 8 Rs. 10/-

Postal Regn No. PTR/136/2022-24
Licensed to Post without pre-payment
License No: SK/WPP/PTR/117/2022-24


## ಪ್ರವೇಶೋತ್ಸವ ಶ್ರೀರಾಮ ಪ್ರಾಥಮಿಕ ಶಾಲೆಯ ಪುಟಾಣಿಗಳ ವಿಶಿಷ್ಟ ಕಾರ್ಯಕ್ರಮ ವೇದವ್ಯಾಸ ಧ್ಯಾನಮಂದಿರದಲ್ಲಿ ಸಂಪನ್ನಗೊಂಡಿತು. 13.7.2024





* ಪ್ರವೇಶೋತ್ಸವ ಕಾರ್ಯಕ್ರಮದಲ್ಲಿ ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಇವರು ಶಾಲೆಯ ಸ್ಥಾಪನೆ, ಬೆಳವಣಿಗೆಯ ಬಗ್ಗೆ ತಿಳಿಸಿದರು. ಭವಿಷ್ಯದ ದಿಟ್ಟ ಭರವಸೆಯೊಂದಿಗೆ ಪುಟ್ಟ ಹೆಜ್ಜೆಗಳನ್ನಿಟ್ಟು ಶಾಲೆಯತ್ತ ಬಂದ 1ನೇ ತರಗತಿಯ ಪುಟಾಣಿಗಳನ್ನು ಅಧ್ಯಾಪಕ ವೃಂದದವರು ಪೂರ್ಣಕುಂಭ ಸ್ವಾಗತದೊಂದಿಗೆ ಕರೆತಂದು, ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕವನ್ನಿಟ್ಟು, ಮಧುರ ತಿನ್ನಿಸಿದರು. ಅತಿಥಿ ಅಭ್ಯಾಗತರು ಘೃತಾಹುತಿ ಮಾಡಿ, ನಂತರ ಹೊಸದಾಗಿ ಸೇರಿದ ವಿದ್ಯಾರ್ಥಿಗಳು ಹಾಗೂ ಅಧ್ಯಾಪಕರು ಘೃತಾಹುತಿ ಮಾಡಿ, ಹಿರಿಯರಿಂದ ಆಶೀರ್ವಾದ ಪಡೆದುಕೊಂಡರು.

* ವೇದಿಕೆಯಲ್ಲಿ ಮಂಗಳೂರು ಕ್ರೆಡಿಟ್ ಬ್ಯಾಂಕ್ ಆಫ್ ಬರೋಡದ ಮುಖ್ಯ ಕಾರ್ಯನಿರ್ವಾಹಣ ಅಧಿಕಾರಿ ಶ್ರೀ ಅರ್ಜುನ್ ರಾವ್, ಹಿರಿಯ ವ್ಯವಸ್ಥಾಪಕರಾದ ಶ್ರೀಮತಿ ಜ್ಞಾನಶ್ರೀ ಅರ್ಜುನ್ ರಾವ್, ಕಾರ್ಕಳ ಮಾರುತಿ ಗ್ಯಾಸ್ ಏಜನ್ಸಿಯ ಮಾಲಕ ಶ್ರೀ ನಿತ್ಯಾನಂದ ಪೈ, ಕಾರ್ಕಳ ಗಾಯತ್ರಿ ಎಕ್ಸ್ಪೋರ್ಟ್‌ನ ಶ್ರೀಮತಿ ಬೋಳ ವಸುಂಧರಾ ಶ್ರೀನಿವಾಸ್ ಕಾಮತ್, ಶ್ರೀ ಬೋಳ ಪ್ರಶಾಂತ್ ಕಾಮತ್ , ಶ್ರೀಮತಿ ಬೋಳ ಪ್ರಿಯಂವದಾ ಪ್ರಶಾಂತ್ ಕಾಮತ್, ವಿದ್ಯಾಕೇಂದ್ರದ ಹಿರಿಯರಾದ ಶ್ರೀ ನಾರಾಯಣ ಸೋಮಯಾಜಿ, ಶ್ರೀ ರಮೇಶ್ ಎನ್, ಡಾ। ಕಮಲಾ ಪ್ರಭಾಕರ್ ಭಟ್ ಹಾಗೂ ಸಹಮುಖ್ಯೋಪಾಧ್ಯಾಯರಾದ ಶ್ರೀ ಸುಮಂತ್ ಆಳ್ವ ಎಮ್ ಉಪಸ್ಥಿತರಿದ್ದರು. ವಿದ್ಯಾರ್ಥಿಗಳಾದ ಅಕ್ಷತಾಲಕ್ಷ್ಮೀ, ಚಿನ್ಮಯಿ, ಆಶಿಕಾ, ಧನ್ಯ ಶ್ರಮಿಕಾ, ವೇದಮಂತ್ರ ಪಠಿಸಿದರು.

## ಶ್ರೀರಾಮ ಸೆಕೆಂಡರಿ ಸ್ಕೂಲ್‌ನ ನೂತನ ಭವನ “ಅಹಲ್ಯಾ” ಲೋಕಾರ್ಪಣೆ ಮತ್ತು ಆಗತ ಸ್ವಾಗತ ಕಾರ್ಯಕ್ರಮ 06.07.2024



ಎಡನೀರು ಮಠದ ಶ್ರೀ ಶ್ರೀ ಸಚ್ಚಿದಾನಂದ ಸ್ವಾಮೀಜಿಯವರು ಅಹಲ್ಯಾ ಭಾಯಿ ಹೋಳ್ಕರ್‌ರ 300ನೇ ಜನ್ಮ ವರ್ಷದ ನೆನಪಿನಲ್ಲಿ ನಿರ್ಮಿಸಿದ “ಅಹಲ್ಯಾ", ನೂತನ ಭವನವನ್ನು ಲೋಕಾರ್ಪಣೆಗೊಳಿಸಿ ಆಶೀರ್ವಚನಗೈದರು. ಜೊತೆಗೆ 2024–25ನೇ ಸಾಲಿನ ಹೊಸದಾಗಿ ಸೇರ್ಪಡೆಗೊಂಡಂತಹ ವಿದ್ಯಾರ್ಥಿಗಳ ಆಗತ ಸ್ವಾಗತ ಕಾರ್ಯಕ್ರಮ ನಡೆಯಿತು.

ಡಾ. ಪ್ರಭಾಕರ್ ಭಟ್ ಕಲ್ಲಡ್ಕ , ಕ್ರೆಡೈ ಮಂಗಳೂರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅರ್ಜುನ್ ರಾವ್, ದೇವೇಂದ್ರ ಬಿ. ಬನ್ನನ್, ಕೆ. ಕೃಷ್ಣಾನಂದ ಕಾಮತ್, ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದು, ಶುಭ ಹಾರೈಸಿದರು.

2023–24ನೇ ಸಾಲಿನ ಎಸ್.ಎಸ್.ಎಲ್.ಸಿ.ಯ ಪ್ರತಿಭಾನ್ವಿತ ವಿದ್ಯಾರ್ಥಿಗಳಾದ ತೀರ್ಥ ಶೆಟ್ಟಿ ಮತ್ತು ವಾಸವಿ ಇವರನ್ನು ಗೌರವಿಸಲಾಯಿತು.





**ಪೋಷಕರ ಸಭೆ 25.7.2024**

ಸರಸ್ವತಿ ಶಿಶುಮಂದಿರ ಕೊಪ್ಪಲಕೋಡಿಯಲ್ಲಿ ನಡೆದ 2024–25ನೇ ಸಾಲಿನ ಪೋಷಕರ ಸಭೆ ಮತ್ತು ಆಡಳಿತ ಮಂಡಳಿ ಸಭೆಯಲ್ಲಿ ವಿದ್ಯಾ–ಕೇಂದ್ರದ ಸಂಚಾಲಕರಾದ ಶ್ರೀ ವಸಂತಮಾಧವ ಮಾರ್ಗದರ್ಶನವನ್ನು ಮಾಡಿದರು. 2 ಜೋಡಿ ದಂಪತಿಗಳು ಸೇರಿ 21 ಜನ ಉಪಸ್ಥಿತರಿದ್ದರು.



**ಕಾರ್ಗಿಲ್ ಸನ್ನಿವೇಶಗಳ ವೀಡಿಯೋ ಪ್ರದರ್ಶನ 26.7.2024**

ಶಿಶುಮಂದಿರದ ಸೀತಾ ತರಗತಿಯಲ್ಲಿ ಮಕ್ಕಳಿಗೆ ದೂರದರ್ಶನದ ಮೂಲಕ ಕಾರ್ಗಿಲ್ ನ ಸನ್ನಿವೇಶಗಳನ್ನು ತೋರಿಸುತ್ತಾ ಶ್ರೀಮತಿ ಶೋಭಾ ಮಾತಾಜಿ ಕಾರ್ಗಿಲ್ ವಿಜಯೋತ್ಸವದ ಬಗ್ಗೆ ಸಂಕ್ಷಿಪ್ತವಾಗಿ ತಿಳಿಸಿದರು.



**ಮಾತೃಭಾರತಿ 26.7.2024**

ಮಾತೃಭಾರತಿಯಲ್ಲಿ ಮಕ್ಕಳ ಗುಣ ಸ್ವಭಾವಗಳ ಬಗ್ಗೆ ತಿಳಿಸಿ, ಮಕ್ಕಳಿಗೆ ಮನೆಯಲ್ಲಿ ಮಾಡಿಸಬಹುದಾದ ಸುಲಭ ಚಟುವಟಿಕೆ ಮತ್ತು ಸುಲಭ ಆಟಗಳನ್ನು ಆಡಿಸಲಾಯಿತು. ಒಟ್ಟು 65 ಮಾತೆಯರು ಉಪಸ್ಥಿತರಿದ್ದರು.

## – ಪ್ರಾಥಮಿಕ ಶಾಲೆ –



**ಪೌಷ್ಟಿಕ ಆಹಾರವಸ್ತು ಪ್ರದರ್ಶನ : 2.7.2024**

ಜಗದೀಶ್ ಚಂದ್ರಬೋಸ್ ವಿಜ್ಞಾನ ಪ್ರಯೋಗಾಲಯದಲ್ಲಿ ಆಹಾರದ ಘಟಕಗಳು ಎಂಬ 6ನೇ ತರಗತಿಯ ವಿಜ್ಞಾನ ಪಾಠ–ಕ್ಕೆ ಸಂಬಂಧಿಸಿದಂತೆ ಪೌಷ್ಟಿಕ ಆಹಾರವಸು ಪ್ರದರ್ಶನ ನಡೆಯಿತು. ವಿದ್ಯಾರ್ಥಿಗಳೊಂದಿಗೆ ಡಾ। ಪ್ರಭಾಕರ್ ಭಟ್ ಕಲ್ಲಡ್ಕ ಅವರು ಪೌಷ್ಟಿಕ ಆಹಾರವಸ್ತು ಪ್ರದರ್ಶನವನ್ನು ವೀಕ್ಷಿಸಿದರು.



**ಪೋಷಕರ ಸಭೆ : 24.7.2024**

ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳ, ಶೈಕ್ಷಣಿಕ ಪ್ರಗತಿಗಾಗಿ ಪೋಷಕರ ಸಭೆ ಕರೆಯಲಾಯಿತು. ಶ್ರೀಮತಿ ಮಲ್ಲಿಕಾ ಆರ್ ಶೆಟ್ಟಿ ಮಾರ್ಗದರ್ಶನ ನೀಡಿದರು. ಅಧ್ಯಾಪಕರಾದ ಸುಮಂತ್ ಆಳ್ವ ಎಂ ಹಾಗೂ ಶ್ರೀಮತಿ ಅನ್ನಪೂರ್ಣ ಎನ್ ಭಟ್ ಉಪಸ್ಥಿತರಿದ್ದರು.



**ಶಾಲಾ ಸಂಸತ್ತು ಹಾಗೂ ವಿವಿಧ ಸಂಘಗಳ ಉದ್ಘಾಟನೆ : 25.7.2024**

ಪ್ರಾಥಮಿಕ ಶಾಲಾ ಸಂಸತ್ತಿನ ಪ್ರಮಾಣವಚನ ಕಾರ್ಯಕ್ರಮ ಹಾಗೂ ಶಾಲೆಯಲ್ಲಿ ನಡೆಸಲ್ಪಡುವ ವಿವಿಧ ಸಂಘಗಳ ಉದ್ಘಾಟನೆ ಕಾರ್ಯಕ್ರಮವು ನಡೆಯಿತು.



**ಕಾರ್ಗಿಲ್ ಸಂಸ್ಮರಣೆ : 27.7.2024**

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ನಿವೃತ್ತ ಯೋಧರಿಗೆ ಶ್ರೀರಾಮ ವಿದ್ಯಾಕೇಂದ್ರದ ಸಹಸಂಚಾಲಕರಾದ ರಮೇಶ್ ಎನ್ ಶಾಲು ಹೊದಿಸಿ ಗೌರವ ಸಮರ್ಪಿಸಿದರು. ಅಧ್ಯಾಪಕ ವೃಂದದವರು ಆರತಿ ಬೆಳಗಿ, ತಿಲಕವನ್ನಿಟ್ಟು ಆಶೀರ್ವಾದ ಪಡೆದುಕೊಂಡರು.



**ಗಿಡ ವಿತರಣೆ : 27.07.2024**

ಕಾರ್ಗಿಲ್ ಸಂಸ್ಮರಣೆ ಅಂಗವಾಗಿ ಗಣಿತ – ವಿಜ್ಞಾನ ಸಂಘದ ವಿದ್ಯಾರ್ಥಿಗಳಿಗೆ ಗಿಡಗಳನ್ನು ವಿತರಿಸಲಾಯಿತು.



**ಗುರುಪೂರ್ಣಿಮೆ: 23.7.2024**

ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆದ ಗುರುಪೂರ್ಣಿಮೆ ಕಾರ್ಯಕ್ರಮದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಸುಜಿತ್ ಕೊಟ್ಟಾರಿ ಕಾರ್ಯಕ್ರಮದ ಮಹತ್ವ ತಿಳಿಸಿಕೊಟ್ಟರು. ಸಹಮುಖ್ಯೋಪಾಧ್ಯಾಯರು ಸುಮಂತ್ ಆಳ್ವ ಎಂ ಉಪಸ್ಥಿತರಿದ್ದರು.

## – ಪ್ರೌಢಶಾಲೆ –



**ಶಾ.ಶಿಕ್ಷಣ ಶಿಕ್ಷಕರ ಜಿಲ್ಲಾ ಬೈಠಕ್ 11.07.2024**

ಮಧುಕರ ಸಭಾಂಗಣದಲ್ಲಿ ದ.ಕಜಿಲ್ಲಾ ಶಾ.ಶಿ.ಶಿಕ್ಷಕರ ಬೈಠಕ್ ನಡೆಯಿತು. ಪ್ರಾಂತ ಕಾರ್ಯದರ್ಶಿ ಶ್ರೀ ವಸಂತ ಮಾಧವ ಮಾಗದರ್ಶನ ಮಾಡಿದರು. ವಿದ್ಯಾಭಾರತಿ ಪ್ರಮುಖರು, ಶಾ.ಶಿ.ಶಿಕ್ಷರು ಉಪಸ್ಥಿತರಿದ್ದರು.



**10ನೇ ತರಗತಿಯ ಪೋಷಕರ ಸಭೆ 19.7.24**

ಸಂಚಾಲಕರಾದ ಶ್ರೀ ವಸಂತ ಮಾಧವ ಮಾರ್ಗದರ್ಶನ ಮಾಡಿದರು. ಸಹಸಂಚಾಲಕರು, ಆಡಳಿತ ಮಂಡಳಿ ಸದಸ್ಯರು, ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.



**ವಿದ್ಯಾರ್ಥಿ ಸಂಸತ್ತು ಪ್ರಮಾಣ ವಚನ 27.7.24**

ವಿದ್ಯಾರ್ಥಿಸಂಸತಿಗೆ ವಿದ್ಯಾರ್ಥಿಗಳು ಪ್ರಮಾಣವಚನವನ್ನು ಸ್ವೀಕರಿಸಿದರು. ವಿದ್ಯಾರ್ಥಿ ಸಂಸತ್ತಿನ ಸಭಾಪತಿ ಪ್ರೀತೇಶ್ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದನು.

## ಸುಭಾಷಿತ ಮಂಜರಿ

ಲಶುನೇ ಕುಸುಮಾಧಿವಾಸನಂ
ಪಿಶುನೇ ಸಜ್ಜನತಾಪ್ರಸಂಜನಂ ।
ಶುನಿ ಕಿಂಚ ಶುಚಿತ್ವಕಲ್ಪನಂ
ನ ವಿಧೇರಧಿಕಾರಗೋಚರಂ ॥

ಬೆಳ್ಳುಳ್ಳಿಯನ್ನು ಹೂಗಳ ಸಹಾಯದಿಂದ ಸುವಾಸನೆ ಬರುವಂತೆ ಮಾಡುವುದು, ದುಷ್ಟನನ್ನೂ, ಚಾಡಿಕೋರನನ್ನೂ, ಒಳ್ಳೆಯವನನ್ನಾಗಿ ಬದಲಾಯಿಸುವುದು, ನಾಯಿಯನ್ನು ಶುಚಿಯಾಗಿ ಮಾಡುವುದು ವಿಧಿಯ ಸಾಮರ್ಥ್ಯವನ್ನೂ ಮೀರಿದೆ. ಅಂದರೆ ಅಸಾಧ್ಯ ಎಂದು ಅರ್ಥ.

### ಸಂಪಾದಕೀಯ

2024– 25ನೇ ಶೈಕ್ಷಣಿಕ ವರ್ಷದಲ್ಲಿ ಸೆಕೆಂಡರಿ ಸ್ಕೂಲ್ ಇದಕ್ಕಾಗಿ ನಿರ್ಮಿಸಿದ ನೂತನ ವಿಸ್ತರಣಾ ಕಟ್ಟಡವು ಪೂಜ್ಯ ಎಡನೀರು ಶ್ರೀಗಳಿಂದ ಲೋಕಾರ್ಪಣೆಗೊಂಡುದುದು ಈ ತಿಂಗಳ ವಿಶೇಷ. ಶ್ರೀಗಳು ವಿದ್ಯಾಸಂಸ್ಥೆಯ ಆವರಣವನ್ನು, ಚಟುವಟಿಕೆಗಳನ್ನು ವೀಕ್ಷಿಸಿ ಹರಸಿದರು. ವಿವಿಧ ವಿಭಾಗಗಳಲ್ಲಿ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ಕ್ರೀಡೆ, ಸಾಂಸ್ಕೃತಿಕ ಹಾಗೂ ವಿಜ್ಞಾನ ಮೇಳಗಳ ಪ್ರಾಥಮಿಕ ಹಂತದ ಸ್ಪರ್ಧೆಗಳು ನಡೆಯುತ್ತಿವೆ. ಶಿಕ್ಷಕರಿಗೆ,ವಿದ್ಯಾರ್ಥಿಗಳಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗಿದೆ. ಹಾಗೂ CA ಪರೀಕ್ಷೆಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿಯ ವಿವರಗಳು ಈ ಬಾರಿಯ ಸಂಚಿಕೆಯಲ್ಲಿದೆ.

ವಂದನೆಗಳೊಂದಿಗೆ

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ಶ್ರೀಮತಿ (ಶಿಶುಮಂದಿರ)
ಚೈತ್ರಾ (ಪ್ರಾಥಮಿಕ ಶಾಲೆ)
ಮೇಘಶ್ರೀ (ಪ್ರೌಢಶಾಲೆ)
ಶ್ವೇತಾ (ಪಿಯುಸಿ)
ಸೌಮ್ಯ (ಸೆಕೆಂಡರಿ ಸ್ಕೂಲ್)
ಸಂಧ್ಯಾ (ಪದವಿ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


**ಶ್ರೀರಾಮ ಶಿಶುಮಂದಿರದಲ್ಲಿ ಗುರುಪೂರ್ಣಿಮೆ ಉತ್ಸವ 22.7.2024**

ಕಾರ್ಯಕ್ರಮದಲ್ಲಿ ಪ್ರಾಥಮಿಕ ಶಾಲೆಯ ಸಹಶಿಕ್ಷಕಿಯಾದ ಶ್ರೀಮತಿ ರಾಜೇಶ್ವರಿ ಮಾತಾಜಿ ಆಗಮಿಸಿ ಮಕ್ಕಳಿಗೆ ಕಥೆ–ಯ ಮೂಲಕ ಗುರುಪೂರ್ಣಿಮೆಯ ಮಹತ್ವವನ್ನು ತಿಳಿಸಿ ಕೊಟ್ಟರು. 132 ಮಕ್ಕಳು ಉಪಸ್ಥಿತರಿದ್ದರು.

## ಪ್ರಾಥಮಿಕ ಶಾಲೆ

**ಕಾರ್ಯಾಗಾರದಲ್ಲಿ ಭಾಗಿ : 9.7.24**

ಮಂಗಳೂರಿನ ಕಾಪು ಮಂದಾರ ಕನ್ವೆಂಶನ್ ಹಾಲ್‌ನಲ್ಲಿ ನಡೆದ ಅಟಲ್ ಟಿಂಕರಿಂಗ್ ಕಾರ್ಯಾಗಾರದಲ್ಲಿ ಪ್ರಾಥಮಿಕ ವಿಭಾಗದ ಅಧ್ಯಾಪಕರಾದ ಶ್ರೀ ಬಾಲಕೃಷ್ಣ ಭಾಗವಹಿಸಿದರು.

**ಶಾಲಾ ಸಂಸತ್ತು ಹಾಗೂ ವಿವಿಧ ಸಂಘಗಳ ಉದ್ಘಾಟನೆ : 25.7.2024**

ವೇದವ್ಯಾಸ ಧ್ಯಾನಮಂದಿರದಲ್ಲಿ ಶಾಲಾ ಸಂಸತ್ತು ಮತ್ತು ವಿವಿಧ ಸಂಘಗಳ ಉದ್ಘಾಟನಾ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಚುನಾಯಿತರಾದ ಸದಸ್ಯರು ಹಾಗೂ ವಿರೋಧ ಪಕ್ಷದವರು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಅತಿಥಿ ಅಭ್ಯಾಗತರಿಂದ ಆಶೀರ್ವಾದ ಪಡೆದುಕೊಂಡರು. ಹಿರಿಯರು ತಿಲಕಧಾರಣೆ ಮಾಡಿದರು. ಸಂಸತ್ತಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಭಾಪತಿಯಾದ 7ನೇ ತರಗತಿಯ ಸುಶ್ಮಿತಾ ಭಟ್ ಪ್ರಮಾಣ ವಚನ ಬೋಧಿಸಿದರು. 5ನೇ ತರಗತಿಯ ಭೂಮಿಕಾ ಪ್ರೇರಣಾ ಗೀತೆ ಹಾಡಿದರು. ಇದೇ ಸಂದರ್ಭದಲ್ಲಿ ವಿವಿಧ ಸಂಘಗಳಾದ ಸಂಸ್ಕೃತ ಸಂಘ, ಕನ್ನಡ ಸಂಘ, ಇಂಗ್ಲೀಷ್ ಸಂಘ, ವಿಜ್ಞಾನ ಸಂಘ, ಕ್ರೀಡಾ ಸಂಘ, ಸಾಂಸ್ಕೃತಿಕ ಸಂಘ ಮತ್ತು ಕಲೆ – ಸಾಹಿತ್ಯಗಳ ಉದ್ಘಾಟನಾ ಕಾರ್ಯಕ್ರಮವನ್ನು ತಾಲೂಕು ಪಂಚಾಯತ್‌ನ ಮಾಜಿ ಉಪಾಧ್ಯಕ್ಷರು, ಭಾ.ಜ.ಪಾ.ದ ಜಿಲ್ಲಾ ಕಾರ್ಯದರ್ಶಿ ಶ್ರೀ ದಿನೇಶ್ ಅಮ್ಟೂರು ನೆರವೇರಿಸಿದರು.

ಶಾಲಾ ನಾಯಕನಾಗಿ ಶಶಾಂಕ, ನಾಯಕಿಯಾಗಿ ಭೂಮಿಕಾ, ಉಪನಾಯಕನಾಗಿ ಶಮಿತ್, ಉಪನಾಯಕಿಯಾಗಿ ಪ್ರಾಪ್ತಿ, ಶಿಕ್ಷಣ ಮಂತ್ರಿಯಾಗಿ ನಿವಾನ್ ಹಾಗೂ ರಾಜೇಶ್ವರಿ ಭಟ್, ಆರೋಗ್ಯ ಮಂತ್ರಿಯಾಗಿ ನಿಶಾಂತ್ ಎಂ. ಮತ್ತು ವಂಶಿಕಾ, ಕೃಷಿ ಮಂತ್ರಿಯಾಗಿ ಧಾತ್ರಿ ವಿ ವೈ ಹಾಗೂ ಭರತ್, ನೀರಾವರಿ ಮಂತ್ರಿಯಾಗಿ ಭುವನ್ ಮತ್ತು ಲಘುವಿ, ಕ್ರೀಡಾ ಮಂತ್ರಿಯಾಗಿ ಸುಹಾನ್ ಮತ್ತು ಮಾನಸ, ಶಿಸ್ತು ಹಾಗೂ ಸ್ವಚ್ಛತಾ ಮಂತ್ರಿಯಾಗಿ ಚಿನ್ಮಯಿ ಮತ್ತು ಮಾನಸ, ಸಾಂಸ್ಕೃತಿಕ ಮಂತ್ರಿಯಾಗಿ ಲತಿಕಾ ಮತ್ತು ಸಾತ್ವಿಕ್, ವಾರ್ತಾ ಮಂತ್ರಿಯಾಗಿ ಜಾನ್ವಿ ಎಸ್.ಪಿ ಮತ್ತು ಶ್ರವಣ್, ಸಭಾಪತಿಯಾಗಿ ಸುಶ್ಮಿತಾ ಭಟ್ ಪ್ರಮಾಣ ವಚನ ಸ್ವೀಕರಿಸಿದರು. ವಿರೋಧಪಕ್ಷದ ನಾಯಕನಾಗಿ ಆರ್ಯನ್ ಹಾಗೂ ನಾಯಕಿಯಾಗಿ ವರ್ಷಾ ಆಯ್ಕೆಯಾಗಿದ್ದಾರೆ.

ವೇದಿಕೆಯಲ್ಲಿ ಸರಕಾರಿ ಪರ ವಕೀಲರು, ವಿದ್ಯಾಕೇಂದ್ರದ ಕೋಶಾಧಿಕಾರಿ ಶ್ರೀ ಶಿವಗಿರಿ ಸತೀಶ್ ಭಟ್, ಬರಿಮಾರು ಗ್ರಾಮ ಪಂಚಾಯತ್‌ನ ಮಾಜಿ ಅಧ್ಯಕ್ಷರಾದ ಶ್ರೀಮತಿ ಶಶಿಕಲಾ, ಬಾಳ್ತಿಲ ಗ್ರಾಮ ಪಂಚಾಯತ್‌ನ ಉಪಾಧ್ಯಕ್ಷರಾದ ಶ್ರೀಮತಿ ರಂಜಿನಿ, ಬಾಳ್ತಿಲ ಗ್ರಾಮ ಪಂಚಾಯತ್‌ನ ಸದಸ್ಯರಾದ ಶ್ರೀ ಗೋಪಾಲ್‌ಕೃಷ್ಣ, ನರಿಕೊಂಬು ಗ್ರಾಮ ಪಂಚಾಯತ್‌ನ ಸದಸ್ಯರಾದ ಶ್ರೀ ಪ್ರಕಾಶ್, ನೆಟ್ಲಮುಡ್ನೂರು ಗ್ರಾಮ ಪಂಚಾಯತ್‌ನ ಮಾಜಿ ಉಪಾಧ್ಯಕ್ಷರಾದ ಶ್ರೀ ತನಿಯಪ್ಪ, ಬಿ.ಜೆ.ಪಿ ಯುವಮೋರ್ಚಾದ ತಾಲೂಕು ಪ್ರಧಾನ ಕಾರ್ಯದರ್ಶಿಯಾದ ಶ್ರೀ ಸಂಪತ್ ಹಾಗೂ ಸಹಮುಖ್ಯೋಪಾಧ್ಯಾಯರಾದ ಶ್ರೀ ಸುಮಂತ್ ಆಳ್ವ ಎಂ. ಉಪಸ್ಥಿತರಿದ್ದರು.

**ಭಜನೆ – ಸಾಮೂಹಿಕ ಹುಟ್ಟುಹಬ್ಬ : 27.7.24**

ವೇದವ್ಯಾಸ ಧ್ಯಾನಮಂದಿರದಲ್ಲಿ ಭಜನೆ ಹಾಗೂ ಸಾಮೂಹಿಕ ಹುಟ್ಟುಹಬ್ಬ ಆಚರಣೆಯಲ್ಲಿ 6ನೇ ತರಗತಿಯ ವಿದ್ಯಾರ್ಥಿಗಳಿಂದ ಭಜನಾ ಕಾರ್ಯಕ್ರಮ ನಡೆಯಿತು. ಅಧ್ಯಾಪಕರಾದ ಶ್ರೀಮತಿ ದಿವ್ಯ ಪೂಜಾರಿ ಕೆ ಇವರು ಕಾರ್ಯಕ್ರಮದ ಮಹತ್ವವನ್ನು ತಿಳಿಸಿದರು. ಹುಟ್ಟುಹಬ್ಬ ಆಚರಿಸಿಕೊಳ್ಳುವ ಮಕ್ಕಳಿಗೆ ಆರತಿ ಬೆಳಗಿ, ಅಕ್ಷತೆ ಹಾಕಿ, ತಿಲಕ ಧಾರಣೆ ಮಾಡಿ, ಸಿಹಿ ನೀಡಿದರು. ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ, ನಿಧಿ ಸಮರ್ಪಿಸಿದರು

**ಕಾರ್ಗಿಲ್ ಸಂಸ್ಮರಣೆ : 27.7.2024**

25ನೇ ವರ್ಷದ ಕಾರ್ಗಿಲ್ ಸಂಸ್ಮರಣೆಯನ್ನು ನಿವೃತ್ತ ಸೈನಿಕರೊಂದಿಗೆ ಹಮ್ಮಿಕೊಳ್ಳಲಾಯಿತು. ಚಂಡಿಗಢ, ಹರಿಯಾಣ, ಲಡಾಖ್, ಪಂಜಾಬ್, ಉತ್ತರಪ್ರದೇಶದಲ್ಲಿ ಪ್ಯಾರಾ ಟ್ರೂಪರ್ ಕಮಾಂಡೋ ಆಗಿ ಸೇವೆ ಸಲ್ಲಿಸಿ ನಿವೃತ್ತರಾದ ಶ್ರೀ ಸತೀಶ್ ಸುವರ್ಣ, ಭೂಸೇನೆಯ ಇ.ಎಂ.ಇ ಕ್ರಾಪ್ಸ್‌ನಲ್ಲಿ ರಿಕವರಿ ಮೆಕ್ಯಾಮಿಕ್ ಆಗಿ ಸೇರ್ಪಡೆಗೊಂಡು, ನಾಯಕ್ ಪದವಿ ಪಡೆದು ನಿವೃತ್ತ ಹೊಂದಿದ, ಶ್ರೀ ಚಂದ್ರಶೇಖರ್, ಆಪರೇಶನ್ ಮೇಘದೂತ್, ಆಪರೇಶನ್ ಬ್ಲೂಸ್ಟಾರ್ ಮುಂತಾದ ಆಪರೇಶನ್‌ನಲ್ಲಿ ಭಾಗವಹಿಸಿ, ಭಾರತೀಯ ಸೇನೆಯಲ್ಲಿ ಪ್ಯಾರಾಚೂಟ್ ಸೆಕೆಂಡ್ ಪ್ಯಾರಾ ಕಮಾಂಡೋ ಬೆಟಾಲಿಯನ್‌ಯಾಗಿ ಕರ್ತವ್ಯ ನಿರ್ವಹಿಸಿ ನಿವೃತ್ತರಾದ ಶ್ರೀ ದಯಾನಂದ್ ಕಾಮತ್ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದ ಮೊದಲಿಗೆ ಮಾಜಿ ಸೈನಿಕರಿಂದ ದೀಪಪ್ರಜ್ವಲನೆ ಹಾಗೂ ಭಾರತಮಾತೆಗೆ ಪುಷ್ಪಾರ್ಚನೆ ನಡೆಯಿತು.

ನಂತರ 7ನೇ ತರಗತಿಯ ಮಾನಸ ಪ್ರೇರಣಾ ಗೀತೆ ಹಾಡಿದರು.

ಭಾರತೀಯ ಭೂಸೇನಾ ನಿವೃತ್ತ ಎ.ಸಿ.ಪಿ ಹವಾಲ್ದಾರ್, ಕರ್ತವ್ಯದ ಸಮಯದಲ್ಲಿ ಪೃಥ್ವಿ 2 ಮಿಸ್ಸೈಲ್ ರಕ್ಷಣಾ ಸಂಶೋಧನ ಮತ್ತು ಅಭಿವೃದ್ಧಿ ಸಂಸ್ಥೆ ಜೊತೆ ಕ್ಷಿಪಣಿ ಕಾರ್ಯಾಚರಣೆಯಲ್ಲಿ ಸೇವೆ ಸಲ್ಲಿಸಿದ ಶ್ರೀ ಜಯಕುಮಾರ್ ಪಿ ಕೆದಿಲ, ದೇಶದ ವಿವಿಧ ಭಾಗಗಳಲ್ಲಿ ಸೇನೆಯಲ್ಲಿ ಕಾರ್ಯನಿರ್ವಹಿಸಿ, ನಿವೃತ್ತರಾದ ಶ್ರೀ ರಾಜೇಂದ್ರ, ಶ್ರೀರಾಮ ವಿದ್ಯಾಕೇಂದ್ರದ ಸಹಸಂಚಾಲಕರಾದ ಶ್ರೀ ರಮೇಶ್ ಎನ್, ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ನಾಗೇಶ್ ಹಾಗೂ ಸಹಮುಖ್ಯೋಪಾಧ್ಯಾಯರಾದ ಶ್ರೀ ಸುಮಂತ್ ಆಳ್ವ ಎಂ ಉಪಸ್ಥಿತರಿದ್ದರು.

**ಅಧ್ಯಾಪಕರ ಬೈಠಕ್: 31.7.24**

ಪೂರ್ವಗುರುಕುಲ ಹಾಗೂ ಹಿರಿಯ ವಿಭಾಗದ ಅಧ್ಯಾಪಕರ ಬೈಠಕ್ ಎರಡು ಹಂತಗಳಲ್ಲಿ ನಡೆಯಿತು. ಶಾಲಾ ಸಂಚಾಲಕರಾದ ಶ್ರೀ ವಸಂತ ಮಾಧವ ಇವರು ಮಾರ್ಗದರ್ಶನ ನೀಡಿದರು. ಈ ಸಂದರ್ಭದಲ್ಲಿ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಲಕ್ಷ್ಮೀ ರಘುರಾಜ್ ಉಪಸ್ಥಿತರಿದ್ದರು.

## ಪ್ರೌಢಶಾಲೆ

**ಸಂಸತ್ತು ಚುನಾವಣೆ 08.07.2024**

2024–25ನೇ ಸಾಲಿನ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಸತ್ತು ಚುನಾವಣೆಯು ನಡೆಯಿತು. ವಿದ್ಯಾರ್ಥಿಗಳು EVM ಆಪ್‌ನ ಮೂಲಕ ಮತ ಚಲಾಯಿಸಿದರು.

**ಸಮಾಲೋಚನಾ ಸಭೆ 16.07.2024**

ಶ್ರೀರಾಮ ವಿದ್ಯಾಕೇಂದ್ರ ಆಶ್ರಯದಲ್ಲಿ ನೂತನವಾಗಿ ಆಂಗ್ಲಮಾಧ್ಯಮ ಶಾಲೆ ಪ್ರಾರಂಭ ಮಾಡುವ ಸಲುವಾಗಿ ಶ್ರೀರಾಮ ಪ್ರೌಢಾಲೆಯ ಮಧುಕರ ಸಭಾಂಗಣದಲ್ಲಿ ಸಮಾಲೋಚನ ಸಭೆ ನಡೆಸಲಾಯಿತು. ವಿದ್ಯಾಕೇಂದ್ರದ ಹಿತೈಷಿಗಳು, ಊರಿನ ಹಾಗೂ ಪರಊರಿನ ಗಣ್ಯರು, ಹಿರಿಯರು, ಆಡಳಿತ ಮಂಡಳಿ ಸದಸ್ಯರುಗಳು ಉಪಸ್ಥಿತರಿದ್ದರು.

**ಸುಧೆಕಾರಿನ ಕೃಷಿಗದ್ದೆಗೆ ಭೇಟಿ** 18.07.2024

ಪ್ರೌಢಶಾಲೆಯ ಅಧ್ಯಾಪಕರ ತಂಡ ಸುಧೆಕಾರಿನ ಕೃಷಿಗದ್ದೆಗೆ ಭೇಟಿ ನೀಡಿ, ಕೃಷಿ ಚಟುವಟಿಕೆಯನ್ನು ವೀಕ್ಷಿಸಿ, ರಕ್ತೇಶ್ವರಿ ದೈವದ ಸನ್ನಿಧಿಯಲ್ಲಿ ಪ್ರಸಾದ ಪಾನೀಯವನ್ನು ಸ್ವೀಕರಿಸಿದರು.

**ಕಾರ್ಗಿಲ್ ವಿಜಯೋತ್ಸವ 25.07.2024**

ಕಾರ್ಗಿಲ್ ವಿಜಯೋತ್ಸವ ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ನಡೆಯಿತು. ಕಾರ್ಯಕ್ರಮದ ಕುರಿತು ಪ್ರೌಢಶಾಲೆಯ ಶಿಕ್ಷಕರಾದ ಶ್ರೀ ಜಿನ್ನಪ್ಪ ಶ್ರೀಮಾನ್ ವಿದ್ಯಾರ್ಥಿಗಳಿಗೆ ತಿಳಿಸಿಕೊಟ್ಟರು.

**ಗುರುಪೂಜಾ ಉತ್ಸವ – ಭಜನೆ 26.7.2024**

ಮಧುಕರ ಸಭಾಂಗಣದಲ್ಲಿ ಗುರು ಪೂಜಾ ಉತ್ಸವ ಮತ್ತು ಭಜನಾ ಕಾರ್ಯಕ್ರಮವನ್ನು ಆಚರಿಸಲಾಯಿತು. ರಾಷ್ಟ್ರೀಯ ಸ್ವಯಂಸೇವಕ ಸಂಘ ಪುತ್ತೂರು ಜಿಲ್ಲಾ ಬೌದ್ಧಿಕ ಪ್ರಮುಖರು ಹಾಗೂ ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಯೋಗ ಶಿಕ್ಷಣ ಪ್ರಮುಖರಾದ ಶ್ರೀ ಚಂದ್ರಶೇಖರ್ ಇವರು ಗುರುಪೂಜೆ ಉತ್ಸವದ ಬಗ್ಗೆ ಮಾತನಾಡಿದರು. ವಿದ್ಯಾಕೇಂದ್ರದ ಸಹ ಸಂಚಾಲಕರಾದ ಶ್ರೀ ರಮೇಶ್ ಎನ್, ಪ್ರೌಢಶಾಲೆಯ ಮುಖ್ಯ ಗುರುಗಳಾದ ಶ್ರೀ ಗೋಪಾಲ್ ಎಂ. ಉಪಸ್ಥಿತರಿದ್ದರು. ವಿದ್ಯಾರ್ಥಿಗಳು ಭಾರತಾಂಬೆಗೆ ಪುಷ್ಪಾರ್ಚನೆ ಮಾಡಿ ಎಲ್ಲಾ ಗುರು ಹಿರಿಯರಿಂದ ಆಶೀರ್ವಾದ ಪಡೆದುಕೊಂಡರು.

**NMMSಗೆ ತರಬೇತಿ 26.7.24**

NMMSಗೆ ಸಂಬಂಧಿಸಿದಂತೆ NSP, OTR ಪ್ರಕ್ರಿಯೆ ಕುರಿತು ತರಬೇತಿಯು ಕ್ಷೇತ್ರ ಸಂಪನ್ಮೂಲ ಕೇಂದ್ರ ಬಂಟ್ವಾಳ ಇದರ ವತಿಯಿಂದ ನಡೆಯಿತು. ಈ ತರಬೇತಿಯಲ್ಲಿ ದೀಕ್ಷಾ ಮತ್ತು ಯಶಸ್ವಿನಿ ಮಾತಾಜಿ ಭಾಗವಹಿಸಿದ್ದರು.

**ವಿದ್ಯಾರ್ಥಿ ಸಂಸತ್ತು ಪ್ರಮಾಣ ವಚನ 27.7.24**

ಮಧುಕರ ಸಭಾಂಗಣದಲ್ಲಿ ವಿದ್ಯಾರ್ಥಿಸಂಸತ್ತಿಗೆ ಸಂಬಂಧಿಸಿ ವಿದ್ಯಾರ್ಥಿಗಳು ಪ್ರಮಾಣವಚನವನ್ನು ಸ್ವೀಕರಿಸಿದರು. ವಿದ್ಯಾರ್ಥಿ ಸಂಸತ್ತಿನ ಸಭಾಪತಿ ಪ್ರೀತೇಶ್ ಎಲ್ಲಾ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿಯನ್ನು ಬೋಧಿಸಿದನು. ಶಿಕ್ಷಕರಾದ ಜಿನ್ನಪ್ಪ ಶ್ರೀಮಾನ್ ಪ್ರಸುತ ದೇಶದಲ್ಲಿ ನಡೆಯುತ್ತಿರುವ ಚುನಾವಣೆಯ ಬಗ್ಗೆ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಿದರು. ಮುಖ್ಯೋಪಾಧ್ಯಾಯರಾದ ಶ್ರೀ ಗೋಪಾಲ ಎಂ,ಶಾಲಾ ವಿದ್ಯಾರ್ಥಿ ಸಂಸತ್ ಮುಂದೆ ಹೇಗೆ ನಡೆದುಕೊಳ್ಳಬೇಕೆಂದು ಮಾರ್ಗದರ್ಶನ ಮಾಡಿದರು. ಎಲ್ಲಾ ವಿದ್ಯಾರ್ಥಿಗಳಿಗೆ ಖಾತೆಗಳನ್ನು ನಿರ್ವಹಿಸಲು ಸೂಚನೆಗಳನ್ನು ನೀಡಲಾಯಿತು.ಕಾರ್ಯಕ್ರಮದ ಕೊನೆಯದಾಗಿ ವಂದೇ ಮಾತರಂ ಹಾಡಲಾಯಿತು ಶಿಕ್ಷಕರಾದ ಕೊಟ್ರೇಶಪ್ಪ ಶ್ರೀಮಾನ್, ಕವಿತಾ ಮಾತಾಜಿ ಮತ್ತು ಮಲ್ಲಿಕಾ ಮಾತಾಜಿ ಕಾರ್ಯಕ್ರಮ ಸಂಯೋಜಿಸಿದರು.

**ಸುಧೆಕಾರಿನ ಕೃಷಿ ಗದ್ದೆಯಲ್ಲಿ ನೇಜಿ ನಾಟಿ**

ಸುಧೆಕಾರಿನ ಕೃಷಿ ಗದ್ದೆಯಲ್ಲಿ ನೇಜಿ ನಾಟಿ ಮಾಡುತ್ತಿರುವ ಶ್ರೀರಾಮ ಪ್ರೌಢಶಾಲೆಯ ವಿದ್ಯಾರ್ಥಿಗಳು

**ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆ**

ವಿದ್ಯಾಭಾರತಿ ಕನಾಟಕ ದ.ಕ ಜಿಲ್ಲೆ ಇದರ ವತಿಯಿಂದ ಕಡಬ ಸರಸ್ವತಿ ವಿದ್ಯಾಲಯದಲ್ಲಿ ನಡೆದ ಜಿಲ್ಲಾ ಮಟ್ಟದ ಯೊಜಗಾಸನ ಸ್ಪರ್ಧೆಯಲ್ಲಿ 14ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕದ ಶುಭ ನಾರಾಯಣ ಭಟ್ (8ನೇ ತರಗತಿ) ಪಂಚಮ ಸ್ಥಾನವನ್ನು ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾಳೆ.

**ವಿದ್ಯಾರ್ಥಿನಿಯರಿಗೆ ಶುಚಿ ವಿತರಣೆ 29.7.24**

ಶ್ರೀ ರಾಮ ಪ್ರೌಢಶಾಲೆಯ ವಿದ್ಯಾರ್ಥಿನಿಯರಿಗೆ ಸರ್ಕಾರದ ವತಿಯಿಂದ ನೀಡಿರುವ ಶುಚಿಯನ್ನು ವಿತರಿಸಲಾಯಿತು.

## ಸೆಕೆಂಡರಿ ಸ್ಕೂಲ್

**ವಿಶ್ವ ಪರಿಸರ ದಿನ 5.7.2024**

ವಿಶ್ವ ಪರಿಸರ ದಿನವನ್ನು ಕಶೆಕೋಡಿ ಶ್ರೀ ಲಕ್ಷ್ಮೀ ವೆಂಕಟರಮಣ ದೇವಸ್ಥಾನದ ವಠಾರದಲ್ಲಿ ಆಚರಿಸಲಾಯಿತು. ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಕಶೆಕೋಡಿ ಸೂರ್ಯನಾರಯಣ ಭಟ್ ಮತ್ತು ದೇವಸ್ಥಾನದ ಮೊಕ್ತೇಸರರು ಮತ್ತು ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಗೋಪಾಲ ಶೆಣೈ ಅವರು ದೀಪ ಪ್ರಜ್ವಲನಗೈದು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

**ವಿಜ್ಞಾನ ಕಾರ್ಯಗಾರ: 15.07.2024**

ಪ್ರಾಯೋಗಿಕ ತಜ್ಞೆ ವೈಷ್ಣವಿ ಭಟ್ ಬೆಂಗಳೂರು ಇವರು ವಿಜ್ಞಾನ ಪ್ರಯೋಗದ ಕುರಿತು ಕಾರ್ಯಗಾರ ನಡೆಸಿಕೊಟ್ಟರು. ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ, ಸೆಕೆಂಡರಿ ಸ್ಕೂಲ್‌ನ ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ರವರು ಉಪಸ್ಥಿತರಿದ್ದರು . ಸೆಕೆಂಡರಿ ಸ್ಕೂಲ್‌ನ ಎಲ್ಲಾ ವಿಜ್ಞಾನ ಶಿಕ್ಷಕರು ಈ ಕಾರ್ಯಗಾರದಲ್ಲಿ ಪಾಲ್ಗೊಂಡಿದ್ದರು.

**20223–24ನೇ ವರ್ಷದ ಶಾಲಾ ಸಂಸತ್ ಪ್ರಮಾಣವಚನ 23.07.2024**

ಪ್ರಮಾಣವಚನ ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಕೋಶಾಧಿಕಾರಿ ಹಾಗೂ ನ್ಯಾಯವಾದಿಯಾಗಿರುವ ಶ್ರೀ ಸತೀಶ್ ಭಟ್ ಶಿವಗಿರಿ ಚುನಾವಣಾ ಪ್ರಕ್ರಿಯೆಯ ಬಗ್ಗೆ ಮಾಹಿತಿ ನೀಡಿದರು. ವೇದಿಕೆಯಲ್ಲಿ ಸೆಕೆಂಡರಿ ಸ್ಕೂಲ್‌ನ ಉಪಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್‌ರವರು ಉಪಸ್ಥಿತರಿದ್ದರು. ವಿದ್ಯಾರ್ಥಿ ನಾಯಕನಾಗಿ ಚನ್ನಬಸವ ರೆಡ್ಡಿ, ಉಪ ವಿದ್ಯಾರ್ಥಿ ನಾಯಕನಾಗಿ ಭುವನ್ ಕಲ್ಯಾಣ್ ಚುನಾವಣೆಯಲ್ಲಿ ಆಯ್ಕೆಯಾಗಿದ್ದರು.

**ಅಗ್ನಿ ಶಾಮಕ ಮತ್ತು ನಿರ್ವಹಣೆಯ ತರಬೇತಿ**

25.7.2024 ಮತ್ತು 26.7.2024

ಎರಡು ದಿನಗಳ ಕಾಲ ಮಂಗಳೂರಿನ ಅಗ್ನಿಶಾಮಕ ಠಾಣೆ ಕದ್ರಿ, ಇಲ್ಲಿ "ಅಗ್ನಿಶಾಮಕ ಮತ್ತು ತುರ್ತು ಸೇವೆ" ಎಂಬ ವಿಷಯವಾಗಿ ಎರಡು ದಿನಗಳ ಕಾಲ ಕಾರ್ಯಾಗಾರ ನಡೆಯಿತು. ಕಾರ್ಯಾಗಾರದಲ್ಲಿ ಅಗ್ನಿ ಅವಘಡಕ್ಕೆ ಕಾರಣಗಳು ಮತ್ತು ಪರಿಹಾರೋಪಾಯಗಳು ಹಾಗೂ ಶಾಲಾ ಕಾಲೇಜುಗಳಲ್ಲಿ ವಿಪತ್ತು ನಿರ್ವಹಣೆಯ ಬಗ್ಗೆ ಮಾಹಿತಿಗಳನ್ನು ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಯ ಮೂಲಕ ತಿಳಿಯಪಡಿಸಿದರು .ಕಾರ್ಯಾಗಾರದಲ್ಲಿ ಶ್ರೀಮತಿ ಹರ್ಷಿತ, ಮತ್ತು ಸುದರ್ಶನ್ ಇವರು ಭಾಗವಹಿಸಿದ್ದರು.

**ಯೋಗಾಸನ ಸ್ಪರ್ಧೆಯಲ್ಲಿ ಭಾಗಿ 27.07.24**

ವಿದ್ಯಾಭಾರತಿ ಕರ್ನಾಟಕ ದ.ಕ ಜಿಲ್ಲೆ ಇದರ ವತಿಯಿಂದ ಕಡಬ ಸರಸ್ವತಿ ವಿದ್ಯಾಲಯದಲ್ಲಿ ನಡೆದ ಜಿಲ್ಲಾ ಮಟ್ಟದ ಯೋಗಸನ ಸ್ಪರ್ಧೆಯಲ್ಲಿ 17ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಶ್ರೀರಾಮ ಸೆಕೆಂಡರಿ ಸ್ಕೂಲ್ ಬ್ರಾಹ್ಮಿ ಮತ್ತು ಸಿಂಚನಾ ಭಾಗವಹಿಸಿರುತ್ತಾರೆ.

## ಪದವಿ ಪೂರ್ವ

**ಪೆನ್ಸಿಲ್ ಡ್ರಾಯಿಂಗ್ ಮತ್ತು ಚುಕ್ಕಿ ರಂಗೋಲಿ ಸ್ಪರ್ಧೆ 11.07.2024**

ಭಾವನ ಸಾಂಸ್ಕೃತಿಕ ಸಂಘದ ವತಿಯಿಂದ ಪೆನ್ಸಿಲ್ ಡ್ರಾಯಿಂಗ್ ಹಾಗೂ ಚುಕ್ಕಿ ರಂಗೋಲಿ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು. ಪೆನ್ಸಿಲ್ ಡ್ರಾಯಿಂಗ್ ಸ್ಪರ್ಧೆಯಲ್ಲಿ ವಿಖ್ಯಾತ್ ದ್ವಿತೀಯ ವಾಣಿಜ್ಯ ವಿಭಾಗ ಬಸವೇಶ್ವರ ಪ್ರಥಮ , ಪ್ರಜ್ಞಾ ಪ್ರಥಮ ಕಲಾವಿಭಾಗ ವಿಕ್ರಮಾದಿತ್ಯ ದ್ವಿತೀಯ. ಪ್ರಜ್ಞಾ ದ್ವಿತೀಯ ವಾಣಿಜ್ಯ ವಿಭಾಗ ಬಸವೇಶ್ವರ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ. ಚುಕ್ಕಿ ರಂಗೋಲಿ ಸ್ಪರ್ಧೆಯಲ್ಲಿ ವಿದ್ಯಾಶ್ರೀ ಮತ್ತು ಚೇತನ ಪ್ರಥಮ ವಾಣಿಜ್ಯ ವಿಭಾಗ ಗುರು ಗೋವಿಂದ ಪ್ರಥಮ. ಪ್ರತೀಕ್ಷಾ ಮತ್ತು ಮೋಕ್ಷ ದ್ವಿತೀಯ ವಿಜ್ಞಾನ ವಿಭಾಗ ಪಾಣಿನಿ ದ್ವಿತೀಯ. ಸ್ವೀಕೃತಿ ಮತ್ತು ಶರಣ್ಯ ಪ್ರಥಮ ವಿಜ್ಞಾನ ವಿಭಾಗ ಮಹಾವೀರ ತೃತೀಯ ಸ್ಥಾನವನ್ನು ಪಡೆದುಕೊಂಡಿರುತ್ತಾರೆ.

**ಉಪನ್ಯಾಸಕರ ಕಾರ್ಯಾಗಾರ 23.07.2024**

ಶಾಲಾ ಶಿಕ್ಷಣ ಪದವಿ ಪೂರ್ವ ವಿಭಾಗ ಇವರು ಸ್ವಾಮಿ ವಿವೇಕಾನಂದ ಪದವಿ ಪೂರ್ವ ಕಾಲೇಜು ಎಡಪದವು ಇಲ್ಲಿ 2024-25ನೇ ಸಾಲಿನ ಕ್ರೀಡಾ ಚಟುವಟಿಕೆಗಳಿಗೆ ಸಂಬಂಧಿಸಿದ ಕಾರ್ಯಾಗಾರದಲ್ಲಿ ಪ್ರಶಾಂತ್ ಶ್ರೀಮಾನ್ ಭಾಗವಹಿಸಿರುತ್ತಾರೆ.

ದಿನಾಂಕ 23.07.2024ರಂದು ಸಂತ ಆಗ್ನೇಸ್ ಪದವಿ ಪೂರ್ವ ಕಾಲೇಜು ಮಂಗಳೂರು ಇಲ್ಲಿ ನಡೆದ ರಸಾಯನಶಾಸ್ತ ಉಪನ್ಯಾಸಕರ ಒಂದು ದಿನದ ಶೈಕ್ಷಣಿಕ ಕಾರ್ಯಾಗಾರದಲ್ಲಿ ಶುಭಾಷಿನಿ ಮತ್ತು ಅಕ್ಷಿತಾ ಮಾತಾಜಿ ಭಾಗವಹಿಸಿರುತ್ತಾರೆ.

**ಕಾರ್ಗಿಲ್ ವಿಜಯೋತ್ಸವ 26.7.2024**

ಕಾರ್ಗಿಲ್ ವಿಜಯೋತ್ಸವ ಕಾರ್ಯಕ್ರಮವನ್ನು ನಡೆಸಲಾಯಿತು. ಮಂಗಳೂರಿನ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನ ಕಾನೂನು ವಿದ್ಯಾರ್ಥಿನಿ, ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತ ವಿದ್ಯಾರ್ಥಿನಿ ಪ್ರಮುಖ್ ಶ್ರೀಲಕ್ಷ್ಮೀ ಮಠದಮೂಲೆ ಸೈನಿಕರು ಮತ್ತು ಕಾರ್ಗಿಲ್ ವಿಜಯದ ಬಗ್ಗೆ ವಿದ್ಯಾರ್ಥಿಗಳಿಗೆ ತಿಳಿಸಿದರು. ಹಿರಿಯ ಉಪನ್ಯಾಸಕರಾದ ಶೋಭಾ. ವಿ. ಶೆಟ್ಟಿ ಮಾತಾಜಿ ವೇದಿಕೆಯಲ್ಲಿ ಉಪಸ್ಥಿತರಿದ್ದರು. ದ್ವಿತೀಯ ವಿಜ್ಞಾನ ವಿಭಾಗದ ವಿದ್ಯಾರ್ಥಿನಿ ಕು.ಶ್ರಮಿಕಾ ಕಾರ್ಯಕ್ರಮವನ್ನು ನಿರ್ವಹಿಸಿದರು.

**"ಅಗ್ನಿಶಾಮಕ ಮತ್ತು ತುರ್ತು ಸೇವೆ" ಕಾರ್ಯಾಗಾರ**

ದಿನಾಂಕ 26.7.2024 ಮತ್ತು 27.7.2024 ರಂದು ಮಂಗಳೂರಿನ ಅಗ್ನಿಶಾಮಕ ಠಾಣೆ ಕದ್ರಿ, ಇಲ್ಲಿ "ಅಗ್ನಿಶಾಮಕ ಮತ್ತು ತುರ್ತು ಸೇವೆ" ಎಂಬ ಕಾರ್ಯಾಗಾರ ನಡೆಯಿತು. ಈ ಕಾರ್ಯಾಗಾರದಲ್ಲಿ ಅಶೋಕ್ ಕುಮಾರ್ ಮತ್ತು ಸೋಮಶೇಖರ್, ಅಗ್ನಿ ಅವಘಡಕ್ಕೆ ಕಾರಣಗಳು ಮತ್ತು ಪರಿಹಾರೋಪಾಯಗಳು ಹಾಗೂ ಶಾಲಾ ಕಾಲೇಜುಗಳಲ್ಲಿ ವಿಪತ್ತು ನಿರ್ವಹಣೆಯ ಬಗ್ಗೆ ಮಾಹಿತಿಗಳನ್ನು ಪಡೆದರು.

**ವಿದ್ಯಾರ್ಥಿ ಸಂಘದ ಉದ್ಘಾಟನೆ 27.07.2024**

2024-2025ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘದ ಉದ್ಘಾಟನಾ ಕಾರ್ಯಕ್ರಮ ನಡೆಯಿತು, ವಿದ್ಯಾರ್ಥಿ ಸಂಘವನ್ನು ಬಂಟ್ವಾಳ ತಾಲೂಕು ಬಿಜೆಪಿ ಅಧ್ಯಕ್ಷರು, ಶ್ರೀರಾಮ ವಿದ್ಯಾ ಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಚೆನ್ನಪ್ಪ ಕೋಟ್ಯನ್ ದೀಪ ಬೆಳಗಿಸಿ ಉದ್ಘಾಟಿಸಿ, ವಿದ್ಯಾರ್ಥಿಗಳು ತಮ್ಮ ಜೀವನದಲ್ಲಿ ಮಾನವೀಯ ಗುಣಗಳನ್ನು ಬೆಳೆಸಿಕೊಳ್ಳುವುದರ ಮೂಲಕ ಸಂಸ್ಕಾರಯುತ ಜೀವನವನ್ನು ನಡೆಸಬೇಕು. ಈ ವಿದ್ಯಾರ್ಥಿ ಸಂಘವು ಉತ್ತಮ ಕಾರ್ಯಗಳನ್ನು ಮಾಡುವುದರ ಮೂಲಕ ಒಂದು ಮಾದರಿ ವಿದ್ಯಾರ್ಥಿ ಸಂಘವಾಗಬೇಕು ಎಂದರು. ಭಾವನ ಸಾಂಸ್ಕೃತಿಕ ಸಂಘದ ನಿರ್ದೇಶಕಿ ಶೋಭಾ ಮಾತಾಜಿ ನೂತನ ವಿದ್ಯಾರ್ಥಿ ಸಂಘಕ್ಕೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಪ್ರತಿಜ್ಞಾವಿಧಿ ಭೋದಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ವಸಂತ ಬಲ್ಲಾಳ್ ಶ್ರೀಮಾನ್ ವಹಿಸಿದ್ದರು. ವಿದ್ಯಾರ್ಥಿ ಸಂಘದ ನಿರ್ದೇಶಕಿ ಜಯಲಕ್ಷ್ಮಿ ಕೆ ಮಾತಾಜಿ ವಿದ್ಯಾರ್ಥಿ ಸಂಘದ ಚುನಾವಣಾ ಪ್ರಕ್ರಿಯೆಯ ವರದಿಯನ್ನು ವಾಚಿಸಿದರು. ದ್ವಿತೀಯ ವಾಣಿಜ್ಯ ವಿಭಾಗದ ಕುಮಾರಿ ಜಯಶ್ರೀ ಸ್ವಾಗತಿಸಿ, ದ್ವಿತೀಯ ವಿಜ್ಞಾನ ವಿಭಾಗದ ಕುಮಾರಿ ಶ್ರೀ ಜನ್ಯ ವಂದಿಸಿ, ದ್ವಿತೀಯ ವಿಜ್ಞಾನ ವಿಭಾಗದ ಕುಮಾರಿ ಶ್ರೀ ಗೌರಿ ಕಾರ್ಯಕ್ರಮವನ್ನು ನಿರ್ವಹಿಸಿದರು.

**ನೇಜಿ ನಾಟಿ 29.7.2024**

ಸುದೇಕಾರ್‌ನ ಗದ್ದೆಯಲ್ಲಿ ದ್ವಿತಿಯ ಪಿಯುಸಿಯ ವಿದ್ಯಾರ್ಥಿಗಳು ನೇಜಿನಾಟಿಯನ್ನು ಮಾಡಿದರು ವಿದ್ಯಾರ್ಥಿಗಳ ಜೊತೆ ಉಪನ್ಯಾಸಕರದ ದಿನೇಶ್, ಆಶೋಕ್ ಕುಮಾರ್ , ಪ್ರಶಾಂತ್, ಚೈತನ್ಯಾ, ದೀಪಿಕಾ, ಶ್ವೇತಾ, ನಯನ ಮಾತಾಜಿ ಉಪಸ್ಥಿತರಿದ್ದರು.

**ಜಿಲ್ಲಾಮಟ್ಟದ ಯೋಗಾಸನ ಸ್ಪರ್ಧೆ**

31.7.2024 ವಿದ್ಯಾಭಾರತಿ ಕನಾಟಕ ದಕ್ಷಿಣ ಕನ್ನಡ ಜಿಲ್ಲೆ ಇದರ ವತಿಯಿಂದ ಕಡಬ ಸರಸ್ವತಿ ವಿದ್ಯಾಲಯದಲಿ ನಡೆದ ಜಿಲ್ಲಾ ಮಟ್ಟದ ಯೋಗಾಸನ ಸ್ಪರ್ಧೆಯಲ್ಲಿ 19ರ ವಯೋಮಾನದ ಬಾಲಕಿಯರ ವಿಭಾಗದಲ್ಲಿ ಪ್ರಥಮ ಪಿಯುಸಿಯ ಚಿಂತನ ಮತ್ತು ಗೀತಾಲಕ್ಷ್ಮೀ ಪ್ರಥಮ ಸ್ಥಾನವನ್ನು ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ.

**ಫುಟ್ಬಾಲ್ ಪಂದ್ಯ 21-7-2024**

ಪುತ್ತೂರು ವಿವೇಕಾನಂದ ಸಿ.ಬಿ.ಎಸ್.ಸಿ ಶಾಲೆಯಲ್ಲಿ ನಡೆದ ಫುಟ್ಬಾಲ್ ಪಂದ್ಯಾವಳಿಯಲ್ಲಿ ಶ್ರೀ ರಾಮ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಪದವಿ

**ಗುರುವಂದನಾ ಕಾರ್ಯಕ್ರಮದಲ್ಲಿ ಭಾಗಿ 13.7.24**

ಕರ್ನಾಟಕ ಶಿಕ್ಷಕ ಮಹಾವಿದ್ಯಾಲಯ ಶಿಕ್ಷಕರ ಸಂಘ, (ರಿ)ಮಂಗಳೂರು ವಿಶ್ವವಿದ್ಯಾನಿಲಯ ವಿಭಾಗ ಇದರ ಆಶ್ರಯದಲ್ಲಿ ಗುರುಪೂರ್ಣಿಮಾ ಜಯಂತಿ ಅಂಗವಾಗಿ ಗುರುವಂದನಾ ಕಾರ್ಯಕ್ರಮ ವಿವೇಕಾನಂದ ಮಹಾವಿದ್ಯಾಲಯ ನೆಹರು, ನಗರ ಪುತ್ತೂರು ಇಲ್ಲಿ ನಡೆಯಿತು. ಈ ಕಾರ್ಯಕ್ರಮದಲ್ಲಿ ಶ್ರೀರಾಮ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರಾದ ಶ್ರೀ ಯತಿರಾಜ್ ಶ್ರೀಮಾನ್, ಶ್ರೀಮತಿ ಜಯಲಕ್ಷ್ಮಿ ಮಾತಾಜಿ, ಶ್ರೀಮತಿ ಸಹನಾ ಮಾತಾಜಿ, ಹಾಗೂ ಶ್ರೀಮತಿ ಸಂಧ್ಯಾ ಮಾತಾಜಿ ಇವರು ಭಾಗವಹಿಸಿರುತ್ತಾರೆ.

# ಶ್ರೀರಾಮ ವಿದ್ಯಾಕೇಂದ್ರದ ವಿವಿಧ ವಿಭಾಗಗಳಲ್ಲಿರುವ ವಿದ್ಯಾರ್ಥಿಗಳ ಹಾಗೂ ಸಿಬ್ಬಂದಿಗಳ ಸಂಖ್ಯಾ ವಿವರ (2024–25)

ಶ್ರೀರಾಮ ಶಿಶುಮಂದಿರ

| ತರಗತಿ ಹೆಸರು | ಒಟ್ಟು | | |
|---|---|---|---|
| | ಗಂಡು | ಹೆಣ್ಣು | ಒಟ್ಟು |
| ಲವ | 16 | 12 | 28 |
| ಕುಶ | 16 | 11 | 27 |
| ಧ್ರುವ | 12 | 15 | 27 |
| ಹನುಮ | 13 | 14 | 27 |
| ಸೀತಾ | 16 | 11 | 27 |
| ಶಬರಿ | 14 | 13 | 27 |
| **ಒಟ್ಟು** | **87** | **76** | **163** |
| ಶ್ರೀಗಣೇಶ ಶಿಶುಮಂದಿರ | 8 | 4 | 12 |
| ಶ್ರೀಕೃಷ್ಣ ಶಿಶುಮಂದಿರ | 14 | 16 | 30 |
| ಅಕ್ಕಮಹಾದೇವಿ ಶಿಶುಮಂದಿರ | 7 | 7 | 14 |
| ಸರಸ್ವತಿ ಶಿಶುಮಂದಿರ | 9 | 13 | 22 |
| **ಒಟ್ಟು** | **38** | **40** | **78** |

ಶ್ರೀರಾಮ ಪ್ರಾಥಮಿಕ ಶಾಲೆ

| | | | |
|---|---|---|---|
| 1ನೇ ಸುಧಾಮ | 10 | 9 | 19 |
| 1ನೇ ಶಾರದಾದೇವಿ | 14 | 11 | 25 |
| 1ನೇ ಅಬ್ಬಕ್ಕ | 9 | 13 | 22 |
| 1ನೇ ಶ್ರೀ ಕೃಷ್ಣ | 11 | 11 | 22 |
| 1ನೇ ಅರ್ಜುನ | 11 | 12 | 23 |
| 1ನೇ ನಚೀಕೇತ | 11 | 12 | 23 |
| 2ನೇ ಕೇಶವ | 12 | 12 | 24 |
| 2ನೇ ಮಾಧವ | 11 | 13 | 24 |
| 2ನೇ ಕನಕ | 13 | 11 | 24 |
| 2ನೇ ಗೌರಿ | 14 | 10 | 24 |
| 2ನೇ ಬಂಕಿಮ | 13 | 11 | 24 |
| 2ನೇ ಮೈತ್ರೇಯಿ | 11 | 12 | 23 |
| 3ನೇ ಸರಸ್ವತಿ | 18 | 9 | 27 |
| 3ನೇ ನೇತಾಜಿ | 13 | 13 | 26 |
| 3ನೇ ಶಿವಾಜಿ | 13 | 14 | 27 |
| 3ನೇ ತಿಲಕ | 12 | 15 | 27 |
| 3ನೇ ಕಬೀರ | 14 | 13 | 27 |
| 3ನೇ ಕಪಿಲ | 14 | 12 | 26 |
| 4ನೇ ಬಾಹುಬಲಿ | 16 | 15 | 31 |
| 4ನೇ ತಾನಾಜಿ | 19 | 12 | 31 |
| 4ನೇ ನಕುಲ | 15 | 15 | 30 |
| 4ನೇ ಶ್ರವಣ | 21 | 4 | 25 |
| 4ನೇ ಶಂಕರ | 16 | 15 | 31 |
| 4ನೇ ಅಶೋಕ | 19 | 12 | 31 |
| 5ನೇ ಅಹಲ್ಯಾ | 18 | 15 | 33 |
| 5ನೇ ಅರವಿಂದ | 18 | 15 | 33 |
| 5ನೇ ಚಂದ್ರಗುಪ್ತ | 18 | 14 | 32 |
| 5ನೇ ಭರತ | 20 | 15 | 35 |
| 5ನೇ ಪ್ರತಾಪ | 20 | 12 | 32 |
| 6ನೇ ಶ್ರೀಹರ್ಷ | 23 | 17 | 40 |
| 6ನೇ ನರೇಂದ್ರ | 23 | 18 | 41 |
| 6ನೇ ಸುಮಿತ್ರೆ | 22 | 18 | 40 |
| 6ನೇ ಶಂಕರ | 22 | 19 | 41 |
| 6ನೇ ಧಧೀಚಿ | 22 | 18 | 40 |
| 7ನೇ ವಿದ್ಯಾವತಿ | 21 | 23 | 44 |
| 7ನೇ ಭಾಮತೀ | 21 | 23 | 44 |
| 7ನೇ ಪಾಣಿನಿ | 21 | 24 | 45 |
| 7ನೇ ಭಗತ್ | 24 | 21 | 45 |
| 7ನೇ ಕೌಸಲ್ಯಾ | 23 | 23 | 46 |
| | **646** | **561** | **1207** |

ಶ್ರೀರಾಮ ಪ್ರೌಢಶಾಲೆ

| ವಿಭಾಗ | ಗಂಡು | ಹೆಣ್ಣು | ಒಟ್ಟು |
|---|---|---|---|
| 8 ಏಕಲವ್ಯ | 29 | 24 | 53 |
| 8 ಕಣ್ಣಗಿ | 30 | 24 | 54 |
| 8 ನರೇಂದ್ರ | 31 | 23 | 54 |
| 8 ಪ್ರಹ್ಲಾದ | 30 | 25 | 55 |
| 8 ನಚಿಕೇತ | 29 | 25 | 54 |
| 9 ಭಾಸ್ಕರ | 28 | 31 | 59 |
| 9 ನಿವೇದಿತಾ | 23 | 10 | 33 |
| 9 ಪತಂಜಲಿ | 27 | 31 | 58 |
| 9 ಚೆನ್ನಮ್ಮ | 14 | 30 | 44 |
| 9 ದೇವಶಿಲ್ಪಿ | 19 | 27 | 46 |
| 9 ಓಬವ್ವ | 24 | 13 | 37 |
| 10 ಆಜಾದ್ | 18 | 28 | 46 |
| 10 ಭರತ | 26 | 17 | 43 |
| 10 ಚ್ಯವನ | 25 | 17 | 42 |
| 10 ದುರ್ಗಾವತಿ | 25 | 17 | 42 |
| 10 ವಿಶ್ವೇಶ್ವರಯ್ಯ | 27 | 17 | 44 |
| 10 ಭಾರ್ಗವ | 24 | 17 | 41 |
| 10 ಗಾರ್ಗಿ | 24 | 17 | 41 |
| **ಒಟ್ಟು** | **453** | **393** | **846** |

ಶ್ರೀರಾಮ ಸೆಕೆಂಡರಿ ಸ್ಕೂಲ್, ಕಲ್ಲಡ್ಕ

| | | | |
|---|---|---|---|
| 9 ತೇಜಸ್ | 21 | 10 | 31 |
| 9 ಓಜಸ್ | 22 | 12 | 34 |
| 10 ತಪಸ್ | 23 | 9 | 32 |
| 10 ಯಶಸ್ | 15 | 18 | 33 |
| **ಒಟ್ಟು** | **81** | **49** | **130** |

ಶ್ರೀರಾಮ ಪದವಿಪೂರ್ವ ವಿದ್ಯಾಲಯ

| | | | |
|---|---|---|---|
| ಪ್ರಥಮ ಕಲಾ | 21 | 11 | 32 |
| ಪ್ರಥಮ ವಾಣಿಜ್ಯ | 130 | 92 | 222 |
| ಪ್ರಥಮ ವಿಜ್ಞಾನ | 55 | 74 | 129 |
| ದ್ವಿತೀಯ ಕಲಾ | 9 | 16 | 25 |
| ದ್ವಿತೀಯ ವಾಣಿಜ್ಯ | 80 | 87 | 167 |
| ದ್ವಿತೀಯ ವಿಜ್ಞಾನ | 33 | 68 | 101 |
| | **328** | **348** | **676** |

ಶ್ರೀರಾಮ ಪದವಿ ವಿದ್ಯಾಲಯ

| | | | |
|---|---|---|---|
| ಪ್ರಥಮ ಬಿಕಾಂ | 12 | 17 | 29 |
| ದ್ವಿತೀಯ ಬಿಕಾಂ | 10 | 19 | 29 |
| ತೃತೀಯ ಬಿಕಾಂ | 14 | 16 | 30 |
| ಪ್ರಥಮ ಬಿ ಎ | 3 | 11 | 14 |
| ದ್ವಿತೀಯ ಬಿ.ಎ | 4 | 7 | 11 |
| ತೃತೀಯ ಬಿ.ಎ | 2 | 10 | 12 |
| ಪ್ರಥಮ ಬಿ.ಸಿ.ಎ | 8 | 18 | 26 |
| ದ್ವಿತೀಯ ಬಿ.ಸಿ.ಎ | 13 | 15 | 28 |
| ತೃತೀಯ ಬಿ.ಸಿ.ಎ | 24 | 35 | 59 |
| | **90** | **148** | **238** |

| ವಿಭಾಗ | ಬೋಧಕರು | ಬೋಧಕೇತರರು | ಒಟ್ಟು |
|---|---|---|---|
| **ಶಿಶುಮಂದಿರ** | **12** | **9** | **21** |
| **ಪ್ರಾಥಮಿಕ ಶಾಲೆ** | **51** | **7** | **58** |
| **ಪ್ರೌಢಶಾಲೆ** | **33** | **8** | **41** |
| **ಸೆಕೆಂಡರಿ ಸ್ಕೂಲ್** | **9** | **3** | **12** |
| **ಪದವಿ ಪೂರ್ವ** | **26** | **10** | **36** |
| **ಪದವಿ** | **23** | **7** | **30** |
| **ಒಟ್ಟು** | **154** | **44** | **198** |

| | |
|---|---|
| **ಚಾಲಕರು & ನಿರ್ವಾಹಕರು** | **26** |
| **ಪಾಕಶಾಲೆ** | **13** |
| **ಆಡಳಿತ ಕಚೇರಿ** | **3** |
| **ಗೋಶಾಲೆ** | **2** |
| **ಒಟ್ಟು** | **44** |

## ಒಟ್ಟು ವಿದ್ಯಾರ್ಥಿಗಳು

| | |
|---|---|
| **ಶಿಶುಮಂದಿರ** | **241** |
| **ಪ್ರಾಥಮಿಕ ಶಾಲೆ** | **1207** |
| **ಪ್ರೌಢಶಾಲೆ** | **846** |
| **ಸೆಕೆಂಡರಿ ಸ್ಕೂಲ್** | **130** |
| **ಪದವಿ ಪೂರ್ವ** | **676** |
| **ಪದವಿ** | **238** |

**3338**

## – ಸೆಕೆಂಡರಿ ಸ್ಕೂಲ್ –



**ಸಂಸತ್ತು ರಚನೆ 2024–25 23.07.2024**

ಸೆಕೆಂಡರಿ ಸ್ಕೂಲ್‌ನ ಶಾಲಾ ಸಂಸತು ರಚನೆ ಮಾಡಲಾಯಿತು. ಚುನಾವಣೆಯಲ್ಲಿ ವಿಜೇತರಾದ ಅಭ್ಯರ್ಥಿಗಳಿಗೆ ಜವಾಬ್ದಾರಿ ನೀಡಿ ಪ್ರಮಾಣವಚನ ಸ್ವೀಕಾರ ಮಾಡಲಾಯಿತು.

## – ಪದವಿಪೂರ್ವ –



**ವಿಜ್ಞಾನ ವಿಭಾಗದ ಉಪನ್ಯಾಸಕರಿಗೆ ಕಾರ್ಯಾಗಾರ 6.7.2024**

ವಿಜ್ಞಾನ ವಿಭಾಗದ ಉಪನ್ಯಾಸಕರಿಗೆ ಮತ್ತು ಪ್ರೌಢಶಾಲೆಯ ವಿದ್ಯಾರ್ಥಿಗಳಿಗೆ Arduino ಕೋಡಿಂಗ್ ಮತ್ತು ಪ್ರಾಜೆಕ್ಟ್ ಮೇಕಿಂಗ್ ಕುರಿತು ಕಾರ್ಯಾಗಾರವನ್ನು ನಡೆಸಲಾಯಿತು.



**ಕೃಷಿ ಕಾರ್ಯ ಚಟುವಟಿಕೆ 23.7.24**

ಪದವಿಪೂರ್ವ ವಿಭಾಗದ ವಿದ್ಯಾರ್ಥಿಗಳು ಸಂಸ್ಥೆಯ ಗದ್ದೆಯಲ್ಲಿ ಕೃಷಿ ಕಾರ್ಯವನ್ನು ನಡೆಸಿದರು. ವಿದ್ಯಾರ್ಥಿಗಳೊಡನೆ ವಾಣಿಜ್ಯ ಶಾಸ್ತ್ರ ಉಪನ್ಯಾಸಕರಾದ ನಾಗರಾಜ ಶ್ರೀಮಾನ್ ಉಪಸ್ಥಿತರಿದ್ದರು.



**ಸಾಂಸ್ಕೃತಿಕ ಕಾರ್ಯಕ್ರಮ 23.07.2024**

ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ದ್ವಿತೀಯ ಪಿಯುಸಿ ವಿದ್ಯಾರ್ಥಿಗಳ ತರಗತಿವಾರು ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಲಾಯಿತು. ಪಾಣಿನಿ ತಂಡ– ವಸು ವತ್ಸಲೇ ಭಾರತ್., ಶಾಲಿವಾಹನ ತಂಡ – ಸಂಭವಾಮಿ ಯುಗೇ ಯುಗೇ, ಬಸವೇಶ್ವರ ತಂಡ – ಬಾರಿಸು ಕನ್ನಡ ಡಿಂಡಿಮವ.

ದಧೀಚಿ ತಂಡ– ರಾಷ್ಟ್ರದೇವೋಭವ, ರೀತಿ ರಾಮತೀರ್ಥ ತಂಡ– ತುಳುನಾಡ ವೈಭವ ಎಂಬ ಶೀರ್ಷಿಕೆಯಡಿಯಲ್ಲಿ ಕಾರ್ಯಕ್ರಮವನ್ನು ಪ್ರದರ್ಶಿಸಿದರು.



**ವ್ಯಾಸ ಪೂರ್ಣಿಮೆ 24.7.24**

ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಕಶೆಕೋಡಿ ಶ್ರೀ ಸೂರ್ಯನಾರಾಯಣ ಭಟ್ ಇವರು ವ್ಯಾಸ ಪೂರ್ಣಿಮೆಯ ಬಗ್ಗೆ ಉಪನ್ಯಾಸ ನೀಡಿದರು. ದ್ವಿತೀಯ ವಾಣಿಜ್ಯ ವಿಭಾಗದ ವಿದ್ಯಾರ್ಥಿನಿ ಕು. ವೈಷ್ಣವಿ ಕಾರ್ಯಕ್ರಮವನ್ನು ನಿರ್ವಹಿಸಿದರು.



**ವಿದ್ಯಾರ್ಥಿ ಸಂಘದ ಉದ್ಘಾಟನೆ 27.07.2024**

2024–2025ನೇ ಶೈಕ್ಷಣಿಕ ವರ್ಷದ ವಿದ್ಯಾರ್ಥಿ ಸಂಘದ ಉದ್ಘಾಟನಾ ಕಾರ್ಯಕ್ರಮ ನಡೆಯಿತು, ವಿದ್ಯಾರ್ಥಿ ಸಂಘವನ್ನು ಬಂಟ್ವಾಳ ತಾಲೂಕು ಬಿಜೆಪಿ ಅಧ್ಯಕ್ಷರು, ಶ್ರೀರಾಮ ವಿದ್ಯಾ ಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀ ಚೆನ್ನಪ್ಪ ಕೋಟ್ಯಾನ್ ದೀಪ ಬೆಳಗಿಸಿ ಉದ್ಘಾಟಿಸಿದರು.



**CA ಪರೀಕ್ಷೆಯಲ್ಲಿ ತೇರ್ಗಡೆ 11.07.2024**

ಪದವಿ ಕಾಲೇಜಿನ ಹಿರಿಯ ವಿದ್ಯಾರ್ಥಿ ಯಕ್ಷಿತ್ ಇವರು CA Inter Group I and II ಪರೀಕ್ಷೆಗಳಲ್ಲಿ ಪ್ರಥಮ ಪ್ರಯತ್ನದಲ್ಲಿ ತೇರ್ಗಡೆ ಹೊಂದಿರುತ್ತಾರೆ.

## – ಪದವಿ –



ದಿನಾಂಕ 26.07.24 ಮತ್ತು 27.07.2024 ರಂದು ಎರಡು ದಿನಗಳ ಕಾಲ ಮಂಗಳೂರಿನ ಅಗ್ನಿಶಾಮಕ ಠಾಣೆ ಕದ್ರಿ, ಇಲ್ಲಿ ಅಗ್ನಿಶಾಮಕ ಮತ್ತು ತುರ್ತು ಸೇವೆ ಎಂಬ ವಿಷಯವಾಗಿ ನಡೆದ ಕಾರ್ಯಾಗಾರದಲ್ಲಿ ಪ.ಪೂ ವಿಭಾಗದ ಶ್ರೀ ಅಶೋಕ್ ಕುಮಾರ್ ಮತ್ತು ಶ್ರೀ ಸೋಮಶೇಖರ್ ಸೆಕೆಂಡರಿ ಸ್ಕೂಲ್‌ನ ಶ್ರೀಮತಿ ಹರ್ಷಿತ, ಶ್ರೀ ಸುದರ್ಶನ್ ಹಾಗೂ ಪದವಿ ವಿಭಾಗದ ಶ್ರೀ ಗಣೇಶ ತರಬೇತಿಯಲ್ಲಿ ಭಾಗವಹಿಸಿದ್ದರು.



**ವಿಶೇಷ ಬೈಠಕ್ 22.07.24**

ಪದವಿ ಮಹಾವಿದ್ಯಾಲಯದಲ್ಲಿ ಅಂತಿಮ ಪದವಿಯನ್ನು ಪೂರೈಸಿದ ವಿದ್ಯಾರ್ಥಿಗಳನ್ನು ಹುಡುಗರನ್ನು ವಿಶೇಷ ಬೈಠಕ್‌ಗೆ ಆಹ್ವಾನಿಸಲಾಗಿತ್ತು. ಪದವಿಯ ನಂತರ ಜೀವನದ ಕೆಲವು ವರ್ಷಗಳನ್ನಾದರೂ ಸಮಾಜ ಕಾರ್ಯಕ್ಕೆ ನೀಡುವ ಅವಶ್ಯಕತೆಯನ್ನು ಈ ವಿದ್ಯಾರ್ಥಿಗಳ ಮುಂದೆ ವಿವರಿಸಲಾಯಿತು. ಸಂಘದ ಮಂಗಳೂರು ವಿಭಾಗದ ವಿಭಾಗ ಪ್ರಚಾರಕ್ ಶ್ರೀ ಸುರೇಶ್ ವಿಷಯ ಮಂಡಿಸಿದರು. ಮಂ.ಗ್ರಾ.ಜಿಲ್ಲಾ ಗ್ರಾಮವಿಕಾಸ್ ಸಂಯೋಜಕ ಶ್ರೀ ಸುಜಿತ್ ಕೊಟ್ಟಾರಿ ಜೊತೆಗಿದ್ದರು.








ಕಾರ್ಯಕ್ರಮದಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ. ಪ್ರಭಾಕರ್ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು.

ಶ್ರೀ.ಕೆ. ಎ. ಗಂಗಾಧರನ್ ಪ್ರಾಂತ ಕೋಶಾಧ್ಯಕ್ಷರು, ಆರೋಗ್ಯ ಭಾರತಿ ಕರ್ನಾಟಕ, ಕು. ಅಶ್ವಿನಿ ರೈ ಸ್ಥಾಪಕರು ಐವಿನ್ ಎಲೆಕ್ಟ್ರಾನಿಕ್ಸ್ ಬೆಂಗಳೂರು .ಶ್ರೀ ಬಿ. ನಾರಾಯಣ್ ಸ್ಥಾಪಕ ಕಾರ್ಯದರ್ಶಿಗಳು, ಶಾಂತಿ ನಿಕೇತನ ಶಾಲೆ ಬೆಂಗಳೂರು, ಶ್ರೀ.ವಿಶಾಲ್ ಡುರಾಫೆ ಉದ್ಯಮಿಗಳು ಮುಂಬಯಿ, ಶ್ರೀ ಬಾಲಕೃಷ್ಣ ಭಂಡಾರಿ ಸಮಾಜ ಸೇವಕರು ಮುಂಬಯಿ, ಶ್ರೀ ಚಂದ್ರಶೇಖರ ಬೆಂಗಳೂರು, ಶ್ರೀ ರಮೇಶ್ ಎನ್, ಡಾ. ಕಮಲಾ ಪ್ರಭಾಕರ್ ಭಟ್, ಮಾಜಿ ಶಾಸಕರಾದ ಶ್ರೀ ಪದ್ಮನಾಭ ಕೊಟ್ಟಾರಿ ಇವರುಗಳು ವೇದಿಕೆಯಲ್ಲಿ ಉಪಸ್ಥಿತರಿದ್ದು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ಕಾರ್ಯಕ್ರಮದಲ್ಲಿ ಹೊಸದಾಗಿ ಸೇರ್ಪಡೆಗೊಂಡ ವಿದ್ಯಾರ್ಥಿಗಳು ಹೋಮಕುಂಡಕ್ಕೆ ಘೃತವನ್ನು ಅರ್ಪಣೆ ಮಾಡಿ ಭಾರತಾಂಬೆಗೆ ಪುಷ್ಪಾರ್ಚನೆ ಮತ್ತು ಹಿರಿಯರಿಂದ ತಿಲಕ ಧಾರಣೆಯೊಂದಿಗೆ ಆಶೀರ್ವಾದ ಪಡೆದರು.

## ಬಿ.ಎ ಪದವಿ ಫಲಿತಾಂಶ

**ದಿನಾಂಕ 18.7.2024 ರಂದು ಮಂಗಳೂರು ವಿಶ್ವವಿದ್ಯಾನಿಲಯದ ಒಂದನೇ ಮತ್ತು ಮೂರನೇ ಸೆಮಿಸ್ಟರ್ ಬಿಎ ವಿದ್ಯಾರ್ಥಿಗಳ ಫಲಿತಾಂಶವು ಪ್ರಕಟಗೊಂಡಿದ್ದು ಶೇ 100 ಫಲಿತಾಂಶ ದಾಖಲಾಗಿದೆ.**





## 24.07.2024 ರಿಂದ 01.08.2024ರವರೆಗೆ ಭಾರತ ದರ್ಶನ ಶೈಕ್ಷಣಿಕ ಪ್ರವಾಸ

9 ದಿನಗಳ ಕಾಲ ಉತ್ತರ ಭಾರತದ ಪ್ರವಾಸದಲ್ಲಿ ದೆಹಲಿಯ ಲೋಟಸ್ ಮಹಲ್, ವಿಷ್ಣುಸ್ತಂಭ, ಇಂಡಿಯಾ ಗೇಟ್, ರಾಜಭವನ, ಕರ್ತವ್ಯ ಪಥ, ಅಯೋದ್ಯೆಯ ಶ್ರೀರಾಮ ಮಂದಿರ, ಕಾಶಿಯ ವಿಶ್ವನಾಥ ಮಂದಿರ, ಹನುಮಾನ್ ಘಡಿ, ಕಾಳಿ ಮಂದಿರ, ಗಂಗಾರತಿ, ಸಾರನಾಥ ಬುದ್ಧ ವಿಹಾರ, ಸಾರನಾಥ ಸ್ತೂಪ, ದೆಹಲಿಯ ಅಕ್ಷರಧಾಮಕ್ಕೆ ಭೇಟಿ ನೀಡಿ ಭಾರತದ ಭವ್ಯ ಪರಂಪರೆ, ಇತಿಹಾಸವನ್ನು ಕಣ್ಣಾರೆ ಕಂಡು ಪುಳಕಿತರಾದರು. ಸುಕನ್ಯಾ ಮಾತಾಜಿ, ಯತಿರಾಜ್ ಶ್ರೀಮಾನ್, ದೀಕ್ಷಿತಾ ಮಾತಾಜಿ, ಸಹನಾ ಮಾತಾಜಿ, ಧನಂಜಯ್ ಶ್ರೀಮಾನ್ ಮತ್ತು 31 ವಿದ್ಯಾರ್ಥಿಗಳು ಜೊತೆಗಿದ್ದರು.


ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 08255 275173, 275373

ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | |
|---|---|
| ಚಿನ್ನಾಭರಣ ಸಾಲ | – 11% |
| ಜಾಮೀನು ಸಾಲ | – 16.5% |
| ಅಡವು ಸಾಲ | – 13.5% |
| ವಾಹನ ಸಾಲ | – 12% |
| ಗೃಹ ನಿರ್ಮಾಣ ಸಾಲ | – 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | |
|---|---|
| 91ದಿನಗಳವರೆಗೆ | – 7.5% |
| 92ರಿಂದ 181 ದಿನಗಳು | – 8% |
| 182 ರಿಂದ 364 ದಿನಗಳು | – 9% |
| 1 ವರ್ಷ ಮತ್ತು ಮೇಲ್ಪಟ್ಟು | – 10% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



Postal Regn No. PTR/136/2022-24 Licensed to Post without pre-payment License No: SK/WPP/PTR/117/2022-24

KARKAN/2014/62363
Posted at Kalladka P.O. on 10th and 15th of Every month

Vol. : 11 Issue : 3 Rs. 10/-

SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Website : www.shriramakalladka.in, www.srvk.org E-mail : info@srvk.org


BOOK POST

ಸವಿಧೇ,


Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363